**ದಿನಾಂಕ: 20.02.2023 ರಂದು ಬೆಳಿಗ್ಗೆ 11.00 ಗಂಟೆಗೆ ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ಅವರ ಕೊಠಡಿಯಲ್ಲಿ ಈ ಸಂಸ್ಥೆಯಲ್ಲಿ ಪ್ರವೇಶ ಪಡೆಯುವ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ ನಡೆದ ಸಭೆಯ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

1. ನಿರ್ದೇಶಕರು ಹಾಗೂ ಡೀನ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು
2. ಪ್ರಾಂಶುಪಾಲರು, ಶ್ರೀ ಅಟಲ್ ಬಿಹಾರಿ ವಾಜಪೇಯಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ಬೆಂಗಳೂರು.
3. ಪ್ರಾಂಶುಪಾಲರು, ಶ್ರೀ ಅಟಲ್ ಬಿಹಾರಿ ವಾಜಪೇಯಿ ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್, ಬೆಂಗಳೂರು
4. ಸಮನ್ವಯಾಧಿಕಾರಿಗಳು, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು
5. ನೋಡಲ್ ಅಧಿಕಾರಿಗಳು, ಬಿ.ಎಸ್ಸಿ., ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್.
6. ಸಹಾಯಕ ಆಡಳಿತಾಧಿಕಾರಿಗಳು, ಆಡಳಿತ ವಿಭಾಗ, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು
7. ಸಹಾಯಕ ಆಡಳಿತಾಧಿಕಾರಿಗಳು, ಲೆಕ್ಕಪತ್ರ ವಿಭಾಗ, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ರವರು ಸ್ವಾಗತಿಸಿದರು.

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 2022–23ನೇ ಸಾಲಿನಲ್ಲಿ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವ್ಯಾಸಂಗಕ್ಕೆ ದಾಖಲಾಗುವ ವಿದ್ಯಾರ್ಥಿಗಳಿಂದ ಎಷ್ಟು ಶುಲ್ಕವನ್ನು ಪಡೆಯಬೇಕಾಗಿರುತ್ತದೆ ಎಂಬುದರ ಬಗ್ಗೆ ಚರ್ಚಿಸಲಾಗಿ:

ಈ ಸಂಸ್ಥೆಯಲ್ಲಿ 2021–22ನೇ ಸಾಲಿನಿಂದ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ತರಗತಿಗಳು ಪ್ರಾರಂಭವಾಗಿದ್ದು, ಸರ್ಕಾರದ ಅಧೀನ ಕಾರ್ಯದರ್ಶಿಗಳು–3, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧಿಸೂಚನೆ ಸಂಖ್ಯೆ: ಎಂಇಡಿ 444 ಎಂಎಸ್ಎಫ್ 2021 ದಿನಾಂಕ: 08.12.2021ರಲ್ಲಿ ಸರ್ಕಾರಿ/ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿ 2021–22ನೇ ಸಾಲಿಗೆ ಪ್ರಥಮ ವರ್ಷದ ಬಿ.ಎಸ್ಸಿ., ನರ್ಸಿಂಗ್ ವ್ಯಾಸಂಗಕ್ಕೆ ದಾಖಲಾಗುವ ವಿದ್ಯಾರ್ಥಿಗಳಿಂದ ವಾರ್ಷಿಕ ರೂ. 6,250/– (Tuition fee Rs. 2,000/- + Misc. fee Rs. 4,250/-) ಗಳನ್ನು ಪಾವತಿಸಿಕೊಳ್ಳುವಂತೆ ಆದೇಶಿಸಲಾಗಿರುತ್ತದೆ ಹಾಗೂ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಬಿ.ಎಸ್ಸಿ., ಕೋರ್ಸ್ ಆಯ್ಕೆ ಪಟ್ಟಿ ಸಂಖ್ಯೆ: ಬೆಂವೈವಿಸಂಸಂ/ವೈ.ಕೋ/02/2012–13 ದಿನಾಂಕ: 11.10.2012ರಲ್ಲಿ ಪ್ರಥಮ ವರ್ಷದ ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವ್ಯಾಸಂಗಕ್ಕೆ ದಾಖಲಾಗುವ ಮತ್ತು ಎರಡನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮುಖಾಂತರ ದಾಖಲಾಗುವ ವಿದ್ಯಾರ್ಥಿಗಳಿಂದ ವಾರ್ಷಿಕ ರೂ. 17,970/–ಗಳನ್ನು ಪಾವತಿಸಿಕೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ. ಮೇಲ್ಕಂಡ ಆದೇಶಗಳಂತೆ ಈ ಸಂಸ್ಥೆಯಲ್ಲಿ 2021–22ನೇ ಸಾಲಿಗೆ ಪ್ರಥಮ ವರ್ಷದ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವ್ಯಾಸಂಗಕ್ಕೆ ಆಯ್ಕೆಯಾಗಿ ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳಿಂದ ಪ್ರವೇಶ ಶುಲ್ಕವನ್ನು ಪಾವತಿಕೊಳ್ಳಲಾಗಿರುತ್ತದೆಂದು ನಿರ್ದೇಶಕರು ಹಾಗೂ ಡೀನ್ ರವರು ಸಭೆಗೆ ತಿಳಿಸಿದರು.

...2.

Scanned with CamScanner

2022-23ನೇ ಸಾಲಿಗೆ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವ್ಯಾಸಾಂಗಕ್ಕೆ ದಾಖಲಾಗುವ ಅಭ್ಯರ್ಥಿಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಪ್ರತ್ಯೇಕವಾಗಿ ಸರ್ಕಾರಿ ಆದೇಶ ಹೊರಡಿಸಿರುವುದಿಲ್ಲ. ಈ ಸಂಸ್ಥೆಯಲ್ಲಿ 2022-23ನೇ ಮತ್ತು ಮುಂದಿನ ವರ್ಷಗಳಲ್ಲಿ ದಾಖಲಾಗುವ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೆ ವರ್ಷದ ಬಿ.ಎಸ್ಸಿ., ನರ್ಸಿಂಗ್ ವಿದ್ಯಾರ್ಥಿಗಳಿಂದ ಸರ್ಕಾರದ ಅಧೀನ ಕಾರ್ಯದರ್ಶಿಗಳು-3, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧಿಸೂಚನೆ ಸಂಖ್ಯೆ: ಎಂಇಡಿ 444 ಎಂಎಸ್ಎಫ್ 2021 ದಿನಾಂಕ: 08.12.2021ರಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ವೈಶಿನಿ/ಎನ್ಆರ್ಸಿ(1)/58/2020-21 ದಿನಾಂಕ: 10.08.2020ರಲ್ಲಿ ನಮೂದಿಸಲಾಗಿರುವ ಶುಲ್ಕ ಮತ್ತು ಪ್ರಥಮ (ಪ್ರಥಮ ಮತ್ತು ಎರಡನೇ ವರ್ಷಕ್ಕೆ ಲ್ಯಾಟರನ್ ಎಂಟ್ರಿ ಮುಖಾಂತರ), ದ್ವಿತೀಯ ಮತ್ತು ತೃತೀಯ ವರ್ಷದ ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವಿದ್ಯಾರ್ಥಿಗಳಿಂದ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಬಿ.ಎಸ್ಸಿ., ಕೋರ್ಸ್ ಆಯ್ಕೆ ಪಟ್ಟಿ ಸಂಖ್ಯೆ: ಬೆಂವೈವಿಸಂಸಂ/ವೈ.ಕೋ/02/2012-13 ದಿನಾಂಕ: 11.10.2012ರಲ್ಲಿ ನಮೂದಿಸಲಾಗಿರುವ ಶುಲ್ಕದ ವಿವರ ಕೆಳಕಂಡಂತಿರುತ್ತದೆ.

| Sl. No. | Year | Fee for B.Sc., Nursing | | Fee for B.Sc., Allied Health Science | |
|---|---|---|---|---|---|
| | | General | SC/ST | General | SC/ST |
| 1 | 1st Year | Rs. 6,250/- | Rs. 6,250/- | Rs. 17,970/- | |
| 2 | 2nd Year | Rs. 2,250/- | Rs. 550/- | Rs. 11,420/- | |
| 3 | 3rd Year | Rs. 2,250/- | Rs. 550/- | Rs. 11,420/- | |
| 4 | 4th Year | Rs. 2,250/- | Rs. 550/- | - | |

ಅದರಂತೆ, ಈ ಸಂಸ್ಥೆಯಲ್ಲಿ 2022-23ನೇ ಮತ್ತು ಮುಂದಿನ ವರ್ಷಗಳಲ್ಲಿ ಬಿ.ಎಸ್ಸಿ., ನರ್ಸಿಂಗ್ ಮತ್ತು ಬಿ.ಎಸ್ಸಿ., ಅಲೈಡ್ ಹೆಲ್ತ್ ಸೈನ್ಸಸ್ ವ್ಯಾಸಂಗಕ್ಕೆ ದಾಖಲಾಗುವ ವಿದ್ಯಾರ್ಥಿಗಳಿಂದ ಮೇಲೆ ನಮೂದಿಸಲಾಗಿರುವ ಮೊತ್ತದಂತೆ ಶುಲ್ಕವನ್ನು ಪಾವತಿಸಿಕೊಳ್ಳಲು ಸಭೆಯು ತೀರ್ಮಾನಿಸಿತು.

ಮೇಲ್ಕಂಡ ತೀರ್ಮಾನಗಳಿಗೆ ಸಭೆಯು ಒಮ್ಮತದಿಂದ ಒಪ್ಪಿಗೆ ಸೂಚಿಸಿತು ಹಾಗೂ ಸಭೆಯಲ್ಲಿ ಚರ್ಚಿಸಲು ಬೇರೇನೂ ವಿಷಯಗಳಿಲ್ಲದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಿರ್ದೇಶಕರು ಹಾಗೂ ಡೀನ್,
ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು

ಪ್ರಾಂಶುಪಾಲರು, ಶ್ರೀ ಅಟಲ್ ಬಿಹಾರಿ ವಾಜಪೇಯಿ
ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ಬೆಂಗಳೂರು

ಪ್ರಾಂಶುಪಾಲರು, ಶ್ರೀ ಅಟಲ್ ಬಿಹಾರಿ ವಾಜಪೇಯಿ
ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್,
ಬೆಂಗಳೂರು

ಸಮನ್ವಯಾಧಿಕಾರಿಗಳು,
ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು

ನೋಡಲ್ ಅಧಿಕಾರಿಗಳು, ಬಿ.ಎಸ್ಸಿ. ನರ್ಸಿಂಗ್ ಮತ್ತು
ಅಲೈಡ್ ಹೆಲ್ತ್ ಸೈನ್ಸಸ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ.,
ಬೆಂಗಳೂರು

C. Hemavathi
ಸಹಾಯಕ ಆಡಳಿತಾಧಿಕಾರಿಗಳು, ಲೆಕ್ಕಪತ್ರ ವಿಭಾಗ
ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು

ಸಹಾಯಕ ಆಡಳಿತಾಧಿಕಾರಿಗಳು, ಆಡಳಿತ ವಿಭಾಗ
ಎಸ್.ಎ.ಬಿ.ವಿ.ಎಂ.ಸಿ.ಆರ್.ಐ., ಬೆಂಗಳೂರು

Scanned with CamScanner